## ಅರ್ಥಪೂರ್ಣ ಲೇಖನ




'ಮೇಷ್ಟ್ರನ್ನು ಕಾಪಾಡಿ', ಪ್ರವೀಣ ಕುಲಕರ್ಣಿ ಅವರ ಮುಖಪುಟ ಲೇಖನ ಮನಮುಟ್ಟುವಂತಿವೆ. ಯಾವುದೇ ಕಾರ್ಯಕ್ರಮದ ಯಶಸ್ಸು, ಕೊರತೆಗಳನ್ನು ವಿಮರ್ಶಿಸಲು ಅಂಕಿ ಅಂಶಗಳು ಅಗತ್ಯ. ಆದರೆ ಉಪಾಧ್ಯಾಯರ ಸಮಸ್ಯೆಯೊಂದಿಗೆ ಅವರಿಗೆ ಸಂಬಂಧಪಡದ ಅನೇಕ ಕಾರ್ಯಕ್ರಮಗಳನ್ನು ಸಹ ಅವರ ತಲೆಗೆ ಕಟ್ಟುವುದು, ನಿರ್ವಹಿಸದಿದ್ದರೆ ಶಿಕ್ಷೆ ಎಂದು ಹೆದರಿಸುವುದು ಇವನ್ನು ಒಳಗೊಂಡಿದೆ. ಈ ಸಮಸ್ಯೆಗಳನ್ನು ಬಗೆಹರಿಸಲು ಸೂಕ್ತ ಕ್ರಮ ಕೈಗೊಂಡು ಮಕ್ಕಳ ವಿದ್ಯಾಭ್ಯಾಸಕ್ಕೆ ಅಧ್ಯಾಪಕರು ಹೆಚ್ಚಿನ ಗಮನಹರಿಸುವಂತೆ ಅನುಕೂಲ ಮಾಡಿ ಕೊಡಬೇಕಾಗಿರುವುದು ಸರ್ಕಾರದ ಕರ್ತವ್ಯ. ಸಮಗ್ರ ಮಾಹಿತಿಯನ್ನೊಳಗೊಂಡ ಉತ್ತಮ ಲೇಖನವಿದು.

—ಡಾ. ಕೆ.ಕೆ. ರಾಮಚಂದ್ರ ಗುಪ್ತ ಹಾಸನ, ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ, ಎಚ್.ಆನಂದಕುಮಾರ್ ಚಿತ್ರದುರ್ಗ, ಪಿ.ಗೋವಿಂದರಾಜ್ ಶಿವಮೊಗ್ಗ, ಕೊಹಿಮ ಬಸರಕೋಡು, ಮೀನಾಕ್ಷಿ ಕೆ.ರಾಮಗುಂಡಿ ಬೈಲಹೊಂಗಲ, ಅರವಿಂದ ಜಿ. ಜೋಷಿ, ಮೈಸೂರು, ಪ. ಚಂದ್ರಕುಮಾರ ಗೌನಹಳ್ಳಿ, ಮಧುರ ಸುಬ್ರಹ್ಮಣ್ಯ, ಬೆಂಗಳೂರು, ಕೃಷ್ಣಪ್ಪ, ಮೈಸೂರು

## ಶಿಕ್ಷಕರು ಪಾಠ ಮಾತ್ರ ಮಾಡಲಿ..

ಶಿಕ್ಷಕರಿಗೆ, ಮಕ್ಕಳಿಗೆ ತುಂಬ ಅಗತ್ಯವಾದ ಲೇಖನ. ಶಿಕ್ಷಣ ಇಲಾಖೆ ಗಮನಿಸಬೇಕಾದ ಬರಹ. ವಿದ್ಯಾರ್ಥಿಗಳಿಗೆ, ಪಾಲಕರಿಗೆ, ನ್ಯಾಯ ಲಭಿಸಬೇಕಾದರೆ, ಶಿಕ್ಷಣದ ಮಟ್ಟ ಉನ್ನತವಾಗಬೇಕಾದರೆ ಶಿಕ್ಷಕರಿಗೆ ಪಾಠ ಮಾಡುವುದು ಮಾತ್ರ ಇರಲಿ.

—ರತ್ನಾಕರ ಹೆಗಡೆಕಟ್ಟೆ, ಮೂಡುಬಿದರೆ

## ಬೋಧಕೇತರ ಕಾರ್ಯ

ಮುಖಪುಟ ಲೇಖನ ಸದ್ಯ ಶಿಕ್ಷಕರ ಬೋಧಕೇತರ ಕಾರ್ಯಗಳ ಮೇಲೆ ಬೆಳಕು ಚೆಲ್ಲುತ್ತದೆ. ನಾನು ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಇಂಗ್ಲಿಷ್ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದು ಸ್ವಲ್ಪ ಕಂಪ್ಯೂಟರ್ ಜ್ಞಾನ ಇದೆ ಎಂದು ನಮ್ಮ ಹೆಡ್ ಮಾಸ್ಟರ್ ನನಗೆ ಆನ್‌ಲೈನ್ ಅಡ್ಮಿಷನ್, ಮಕ್ಕಳ ಟಿ.ಸಿ. ಕೊಡುವುದು, ಈಗ ಶಿಷ್ಯವೇತನ ಆನ್‌ಲೈನ್ ಅರ್ಜಿ ಹಾಕುವುದು.. ಎಲ್ಲವನ್ನೂ ನನಗೆ ಕೊಡುತ್ತಿದ್ದಾರೆ.

—ಶಾರದಾ ಹೊನಕೇರಿ

## ಹೆಚ್ಚಿದ ಒತ್ತಡ

ಲೇಖನ ಸಕಾಲಿಕ. ಶಿಕ್ಷಕರಿಗೆ ಹಚ್ಚಿರುವ ಇತರೆ ಕೆಲಸಗಳು ಮುಖ್ಯವಾದ ಬೋಧನೆಯನ್ನೇ ನುಂಗಿ ಹಾಕುತ್ತಿದೆ. ಒತ್ತಡ ತಡೆಯಲಾಗದೆ ಸ್ವಯಂ ನಿವೃತ್ತಿಗೆ ಮೊರೆ ಹೋದವರೂ ಇದ್ದಾರೆ.

—ಕೆ.ವಿ.ರಾಜಲಕ್ಷ್ಮಿ ಬೆಂಗಳೂರು, ಜೆ.ಜಿ. ಉಪಾಧ್ಯಾಯ, ಪುತ್ತೂರು

## ಸಾಂದರ್ಭಿಕ ಬರಹ

'ಗಾಂಧಿ 150' (ನಿರೂಪಣೆ ಪದ್ಮನಾಭ ಭಟ್) ಲೇಖನ ಸಾಂದರ್ಭಿಕವಾಗಿದ್ದು, ಉತ್ತಮ ಮಾಹಿತಿಗಳನ್ನು ಒಳಗೊಂಡಿದೆ. ವಿಶ್ವವ್ಯಾಪಿ ವಂದಿತ ಗಾಂಧಿಯನ್ನು ಭಾರತದಲ್ಲಿ ದುರುಪಯೋಗ ಪಡಿಸಿಕೊಂಡು 'ಅಪ್ರಸ್ತುತ' ಎಂದು ಪರಿಗಣಿಸಲಾಗುತ್ತಿರುವ ಕಾಲಘಟ್ಟದಲ್ಲಿ ಅವರ ಚಿಂತನೆಗಳನ್ನು ಪುನರುಜ್ಜೀವನಗೊಳಿಸುವ ವಿಚಾರಗಳು ಮೂಡಿ ಬಂದಿದೆ.

—ನರೇಂದ್ರ ಸಿರಕಜೆ, ಮೈಸೂರು

## ಕ್ರೀಡಾ ಲೇಖನ

'ಲಂಕಾ ಮಂಕು, ಅಫ್ಘಾನ ಮಿಂಚು' (ಗಿರೀಶ ದೊಡ್ಡಮನಿ) ಲೇಖನ ವಸ್ತು ಸ್ಥಿತಿಗೆ ಕನ್ನಡಿ ಹಿಡಿದಂತಿದೆ. 'ಭಾರತೀಯ ಕ್ರಿಕೆಟ್ ಹಾಗೂ ರಾಜಕಾರಣದಲ್ಲಿ ಎಂಥ ಬದಲಾವಣೆ ಬಯಸುವಿರಿ?' ಎಂಬ ಪ್ರಶ್ನೆಗೆ ಎಪ್ಪತ್ತರ ದಶಕದಲ್ಲಿಯೇ ಖ್ಯಾತ ಲೇಖಕ, ನಟ, ನಿರ್ದೇಶಕ ಇಂದ್ರಸೇನ ಜೋಹರ್ 'ಕ್ರಿಕೆಟ್‌ನಲ್ಲಿ ಕಡಿಮೆ ರಾಜಕೀಯ ಹಾಗೂ ರಾಜಕೀಯದಲ್ಲಿ ಹೆಚ್ಚು ಕ್ರಿಕೆಟ್' ಎಂದು ಉತ್ತರಿಸಿದರು. ಇಂದು ಕ್ರಿಕೆಟ್ ಆಡುವ ಜಗತ್ತಿನ ಎಲ್ಲ ದೇಶಗಳಲ್ಲಿ ರಾಜಕಾರಣದ ವಿಷ ಬೀಜಗಳು ಎಲ್ಲ ಕ್ರೀಡೆಗಳಂತೆ ಕ್ರಿಕೆಟನ್ನು ಬಿಟ್ಟಿಲ್ಲ. ಹಾಗಾಗಿ ಈ ಉತ್ತರ ಇಂದಿಗೂ ಸಮಪರ್ಕಕ, ಸುಸಂಗತವಾಗಿದೆ.

—ಮುಕುಂದ ಹೆರಕಲ್ಲ, ಕಲಬುರ್ಗಿ

## ಲೋನಾರ್ ಸರೋವರ

ಉಪ್ಪು ನೀರಿನ ಸರೋವರ 'ಲೋನಾರ್' (ಧರ್ಮಾನಂದ ಶಿರ್ವ) ಪ್ರವಾಸ ಲೇಖನ ಬಹಳ ಚೆನ್ನಾಗಿದೆ. ಉಲ್ಕಾಪಾತದಿಂದ ರೂಪುಗೊಂಡ ದೇಶದ ಏಕೈಕ ಸರೋವರವಿದು. ಜೊತೆಗೆ ಮಂಗಳ ಗ್ರಹದ ಪರಿಸರವನ್ನು ಒಳಗೊಂಡಿದೆ ಎನ್ನುವ ಊಹೆಯ ಹಲವು ದಂತಕಥೆ ಐತಿಹ್ಯಗಳ ಕೇಂದ್ರವಾಗಿರುವ ಲೋನಾರ್ ಸರೋವರದ ಬಗ್ಗೆ ಉಪಯುಕ್ತ ಮಾಹಿತಿ ಮೂಡಿ ಬಂದಿದೆ.

—ರವೀಂದ್ರನಾಥ ಶಿ.ಯಡಹಳ್ಳಿ, ಬೀಳಗಿ, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

## ಸೇಬು ಫೇಷಿಯಲ್

ಸೌಂದರ್ಯ ಅಂಕಣದಲ್ಲಿ 'ಮುಖದ ಕಾಂತಿಗೆ ಸೇಬು ಫೇಷಿಯಲ್' (ಯು. ಅನಂತ್) ಲೇಖನ ಸೌಂದರ್ಯಪ್ರಿಯರಿಗೆ ಉಪಯುಕ್ತ ಮಾಹಿತಿ ಒದಗಿಸಿತು. ಮುಖದ ತ್ವಚೆ ನಯವಾಗಿ ಹೊಳಪಿನಿಂದ ಕೂಡಿ ಆಕರ್ಷಿತವಾಗಿ ಕಾಣಬೇಕೆಂಬುದು ಎಲ್ಲರ ಬಯಕೆ. ಇದರ ಈಡೇರಿಕೆಗೆ ಒಳ್ಳೆಯ ನೈಸರ್ಗಿಕ ಫೇಷಿಯಲ್ ದೊರೆತಂತಾಯಿತು.

—ಪ್ರಾರ್ಥನಾ ಹೇಮಂತಕುಮಾರ ಬೆಂಗಳೂರು

## ಎತ್ತರದ ಉತ್ತರ!

'ನೀವು ಕೇಳಿದಿರಿ?' (ರಾಮ್) ಅಂಕಣದ ಬಹುಮಾನಿತ ಪ್ರಶ್ನೆಗೆ ಉತ್ತರ ತಮ್ಮ ಸ್ವೋಪಜ್ಞತೆಗೆ ಸಾಕ್ಷಿಯಾಗಿದೆ. ಉತ್ತರ ಕುಮಾರರು, ಉತ್ತರ ಭೂಪರು ಎಂದು ತಿಳಿಯುವುದು ಶುದ್ಧ ತಪ್ಪು. ಎತ್ತರದ— ಉತ್ತರ ತಮ್ಮದು.

—ಬಿ.ಎನ್. ಸೊಲ್ಲಾಪುರೆ, ಕಮಲನಗರ

## ಮಹತ್ವದ ವಿವರ

ಆರೋಗ್ಯ ಲೇಖನ 'ಕಿಡ್ನಿ ಸಂರಕ್ಷಣೆ ಹೇಗೆ?' (ಡಾ. ಶುಭಮಂಗಳ ಆಚಾರ್ಯ) ಚೆನ್ನಾಗಿದೆ. ಕಿಡ್ನಿಗೆ ಸಂಬಂಧಿಸಿದ ಹಲವು ಮಹತ್ವಪೂರ್ಣ ಮಾಹಿತಿ ಬರಹದಲ್ಲಿದೆ.

—ವಿ. ಹೇಮಂತ ಕುಮಾರ, ಎಚ್.ಎಸ್. ರಾಘವೇಂದ್ರ, ಬೆಂಗಳೂರು



## ಉಪಯುಕ್ತ ಲೇಖನ

'ಆರೋಗ್ಯಕ್ಕಾಗಿ ಬೆಲ್ಲ' (ಬಿ. ಹನುಮಂತ ಭಟ್) ಅನೇಕ ಉಪಯುಕ್ತ ಮಾಹಿತಿಗಳನ್ನು, ಅದರಲ್ಲೂ ಸ್ವಸ್ಥ ಆರೋಗ್ಯದ ಬಗ್ಗೆ ವಿವರಗಳನ್ನು ಹೊಂದಿದೆ.

—ಸುಂದರ್ ಬೆಂಗಳೂರು, ರಾಜಶೇಖರ ಹಾದಿಮನಿ ಧಾರವಾಡ

## ಫೇಸ್‌ಬುಕ್ ಬರಹ

'ಲೈಕು'ಗಳ ಮಿಥ್ಯಾ ಲೋಕದಲ್ಲಿ' (ಕೆ.ಪಿ. ಸತ್ಯನಾರಾಯಣ, ಸೆ.27ರ ಸಂಚಿಕೆ) ಲೇಖನ ಚೆನ್ನಾಗಿದೆ. 70–80 ರ ದಶಕಗಳ 'ಸುಧಾ' ವಾರ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಜಿ.ಪಿ.ರಾಜರತ್ನಂ ರವರ 'ವಿಚಾರ ರಶ್ಮಿ' ಅಂಕಣ ಬಹಳ ಜನಪ್ರಿಯವಾಗಿತ್ತು. ಈಚೆಗೆ 'ಫೇಸ್ ಬುಕ್' ನಲ್ಲಿ ಅಂದಿನ ಕೆಲವು ಅಂಕಣಗಳನ್ನು ನೋಡಿ ಸಂತೋಷವಾಯಿತು. ಇದು ಪುಸ್ತಕರೂಪದಲ್ಲಿ ಸಿಗುತ್ತದೆಯೇ? ಆ ಅಂಕಣಗಳನ್ನು ಪುನಃ ಪ್ರಕಟಿಸಲು ಸಾಧ್ಯವೇ? ಇದು ಇಂದಿಗೂ ಅದೇ ಜನಪ್ರಿಯತೆ ಹೊಂದುವುದರಲ್ಲಿ ಸಂದೇಹವಿಲ್ಲ.

—ಎನ್.ರಾಘವನ್, ಬೆಂಗಳೂರು